ಕರ್ನಾಟಕ ವಿಧಾನ ಸಭೆ

ಮಂಗಳವಾರ , 31ನೇ ಮಾರ್ಚ್ 1992

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 11-15 ಗಂಟೆಗೆ ಸಮಾವೇಶಗೊಂಡಿತು.

ಉಪಾಧ್ಯಕ್ಷರು : ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ ಅವರು ಪೀಠವನ್ನು ಅಲಂಕರಿಸಿದರು.

ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.

ಕರ್ನಾಟಕ ರಾಜ್ಯ ಲಾಟರಿಯಿಂದ ಸಂಗ್ರಹಿಸಲಾದ ಹಣ.

499 (2333) ಶ್ರೀ ಜಿ.ಎಸ್.ಆಚಾರ್, (ಬೈಂದೂರ್)ಉಳಿತಾಯ, ರಾಜ್ಯ ಲಾಟರಿ ಮತ್ತು ವಿಮಾ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ :-

ಅ) 1991-92ನೇ ಸಾಲಿನಲ್ಲಿ ಕರ್ನಾಟಕ ರಾಜ್ಯ ಲಾಟರಿ ಟಿಕೇಟುಗಳ ಮಾರಾಟದಿಂದ ವರ್ಷದಲ್ಲಿ ಈ ತನಕ ಎಷ್ಟು ಸಂಗ್ರಹಿಸಲಾಗಿದೆ ;

ಆ) ಅದಕ್ಕೆ ತಗಲಿದ ವೆಚ್ಚವೆಷ್ಟು? ಹಾಗೂ ಸಿಬ್ಬಂದಿ ಖರ್ಚು ಎಷ್ಟು ;

ಇ) ಲಾಟರಿ ಯೋಜನೆಯನ್ನು ಸರ್ಕಾರವೇ ನಡೆಸುವುದರ ಉದ್ದೇಶವೇನು ?

ಶ್ರೀ ಟಿ.ಎಂ.ಮಂಜುನಾಥ್ (ಸಣ್ಣ ಉಳಿತಾಯ, ರಾಜ್ಯ ಲಾಟರಿ ಹಾಗೂ ವಿಮಾ ರಾಜ್ಯ ಮಂತ್ರಿಗಳು)-

ಅ) ರೂ.10,09,01,562-00

ಆ)

	ರೂ.
ಬಹುಮಾನ ವಿತರಣೆ	6,05,61,331
ಇತರ ಸಾದಿಲ್ವಾರು ವೆಚ್ಚ	79,66,938
ಸಿಬ್ಬಂದಿ ವೇತನ	5,49,665
ನಿವ್ವಳ ಲಾಭ	3,18,23,628

ಇ) ಪಕ್ಷಪಾತವಲ್ಲದ ಹಾಗೂ ಸುಸಂಬದ್ಧವಾದ ರೀತಿಯಲ್ಲಿ ನಡೆಸುವ ಉದ್ದೇಶದಿಂದ ಸರ್ಕಾರವೇ ಲಾಟರಿಯನ್ನು ನಡೆಸುತ್ತಲಿದೆ.

ಶ್ರೀ ಜಿ.ಎಸ್.ಆಚಾರ್: ಮಾನ್ಯ ಉಪಾಧ್ಯಕ್ಷರೇ, ಕರ್ನಾಟಕ ರಾಜ್ಯದಲ್ಲಿ ಲಾಟರಿ ಟಿಕೇಟುಗಳ ಮಾರಾಟದಿಂದ 10 ಕೋಟಿ ರೂಪಾಯಿಗಳ ವರಮಾನವಿದೆ ಎಂದು ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ನನಗೆ ತಿಳಿದ ಮಾಹಿತಿಯ ಪ್ರಕಾರ ಹಾಗೂ ತಾವು ಬೇಡಿಕೆಗಳ ಬಗ್ಗೆ ಒದಗಿಸಿದ ಕೆಲವು ಮಾಹಿತಿಯನ್ನು ಕಂಡುಕೊಂಡ ಪ್ರಕಾರ ಅದರ ಆದಾಯವು ಇನ್ನೂ ಜಾಸ್ತಿ ಇದೆ. ಮಾರ್ಚ್ ಅಂತ್ಯಕ್ಕೆ ಇದು ಸುಮಾರು 24 ಕೋಟಿ ರೂಪಾಯಿಗಳು ಆಗುತ್ತದೆಂದು ನಾನು ನಿರೀಕ್ಷಿಸುತ್ತೇನೆ. ಅದಲ್ಲದೆ ಈ ಲಾಭದ ಹಣವು 5 ಕೋಟಿಗಳ ಹತ್ತಿರ ಇರಬಹುದೆಂದು ಭಾವಿಸುತ್ತೇನೆ. ಆದುದರಿಂದ ಯಾವುದು ಸರಿ ? ಯಾವುದು ತಪ್ಪು ಎನ್ನುವುದು ಒಂದು, ಎರಡನೆಯದಾಗಿ 1992-93ನೇ ಸಾಲಿಗೆ ಸರ್ಕಾರ ಏನು ಗುರಿಯನ್ನಿಟ್ಟುಕೊಂಡಿದೆ ಎನ್ನುವುದನ್ನು ಕೇಳಬಯಸುತ್ತೇನೆ.

ಶ್ರೀ ಟಿ.ಎಂ.ಮಂಜುನಾಥ್:- ಮಾನ್ಯ ಉಪಾಧ್ಯಕ್ಷಿಣಿಯವರೆ, ನಾವು ಒದಗಿಸಿರತಕ್ಕ ಸಂಖ್ಯೆಗಳು ನಿಜವಾಗಿರತಕ್ಕದ್ದು. ಅವರು ಹೇಳಿರತಕ್ಕದ್ದು ಸರಿಯಲ್ಲ. ಹಿಂದಿನ ವರ್ಷ 10 ಕೋಟಿ ಬೆಲೆ ಬಾಳುವ ಲಾಟರಿ ಟಿಕೇಟುಗಳು ಮಾರಾಟವಾಗಿದೆ. ಅದರಲ್ಲಿ ಬಹುಮಾನ ವಿತರಣೆ ಮಾಡುವುದಕ್ಕೋಸ್ಕರ 6

ಕೋಟಿ ಹಣ, ಮತ್ತು ಇತರೆ ಖರ್ಚಿಗಾಗಿ 79 ಲಕ್ಷ ಹೋಗಿ ಉಳಿದಿರತಕ್ಕದ್ದು ಮೂರು ಕೋಟಿ 18 ಲಕ್ಷ ರೂಪಾಯಿಗಳು. ಈ ತಿಂಗಳ ಕೊನೆಯೊಳಗೆ ಸುಮಾರು 4 ಕೋಟಿ 60 ಲಕ್ಷ ರೂಪಾಯಿ ಲಾಭ ಈ ಲಾಟರಿ ಖಾತೆಯಿಂದ ಬಂದಿದೆ ಎಂದು ಅವರ ಮುಂದೆ ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಅವರ ಇನ್ನೊಂದು ಪ್ರಶ್ನೆಗೆ ಈ ಲಾಟರಿಯನ್ನು ಪಾಪ್ಯುಲರೈಸ್ ಮಾಡುವುದಕ್ಕೆ ಇನ್ನು ಏನು ಮಾಡಿದ್ದೀರಿ ಎಂದು ಕೇಳಿದ್ದಾರೆ. ಅದಕ್ಕೆ ಮೊನ್ನೆ ತಾನೇ "ಮೈಸೂರು ಲಕ್ಷ್ಮಿ" ಅಂತ ಸಿಂಗಲ್ ಡಿಜಿಟ್ ಲಾಟರಿಯನ್ನು ನಾವು ಮಾಡಿದ್ದೇವೆ. ಅದನ್ನು ಮಾಡಿರತಕ್ಕಂಥಹ ಉದ್ದೇಶ ಇಷ್ಟೇ. ತಮಗೆ ಆಗಲೇ ಹೇಳಿದ ಹಾಗೆ ನಮ್ಮ ರಾಜ್ಯದಲ್ಲಿ ಸುಮಾರು 400 ತರಹದ ಲಾಟರಿ ಟಿಕೆಟ್‌ಗಳು ದಿನನಿತ್ಯ ಮಾರಾಟವಾಗುತ್ತಿವೆ. ಅದೆಲ್ಲವೂ ಸಹ ಅನೇಕ ಫ್ರಾಡ್ ಲಾಟರಿ ಟಿಕೆಟ್‌ಗಳು ಎನ್ನುವುದನ್ನು ಸರ್ಕಾರದ ಗಮನಕ್ಕೆ ತಂದು ಅದನ್ನು ಕೂಡಲೆ ಜಪ್ತಿ ಮಾಡತಕ್ಕಂಥಹ ವಿಚಾರವನ್ನು ನಮ್ಮ ಅಧಿಕಾರಿಗಳು ಮಾಡಿದ್ದಾರೆ. ಈ ಒಂದು ಪಾಪ್ಯುಲರೈಸ್ ಮಾಡುವುದಕ್ಕೋಸ್ಕರ ನಾವು ಸಿಂಗಲ್ ಡಿಜಿಟ್ ಲಾಟರಿ ಮಾಡುವುದರಿಂದ ನಮ್ಮ ರಾಜ್ಯಕ್ಕೆ ಮುಂದಿನ ವರ್ಷ ಸುಮಾರು ಆರೂವರೆ ಕೋಟಿ ರೂಪಾಯಿಗಳ ಲಾಭ ಬರುತ್ತದೆ ಎನ್ನುವುದನ್ನು ಸಭೆಯ ಗಮನಕ್ಕೆ ತರುತ್ತಿದ್ದೇನೆ, ಮತ್ತು ನಮ್ಮ ಸಭೆಯ ಮಾನ್ಯ ಸದಸ್ಯರ ಗಮನಕ್ಕೂ ತರುತ್ತಿದ್ದೇನೆ. ಇವತ್ತಿನ ದಿವಸ ನಮ್ಮ ರಾಜ್ಯಸರ್ಕಾರಕ್ಕೆ ಒಟ್ಟಾರೆ ಈ ಒಂದು ಲಾಟರಿ ಇಲಾಖೆ ಬಂದಾಗಿನಿಂದ 50 ಕೋಟಿ ರಾಪಾಯಿಗಳ ಒಂದು ಆದಾಯ ನಮ್ಮ ಸರ್ಕಾರದ ಖಜಾನೆಗೆ ಬಂದಿದೆಯೆಂದು ನಾನು ಹೇಳುತ್ತಿದ್ದೇನೆ. ಇದು ದಿನನಿತ್ಯ ನಮ್ಮ ರಾಜ್ಯದಲ್ಲಿ ಅಷ್ಟೇ ಅಲ್ಲ, ಇಡೀ ಭಾರತ ದೇಶದಲ್ಲಿ ಕರ್ನಾಟಕ ರಾಜ್ಯ ಲಾಟರಿ ಸ್ವಯಂ ಆಡಳಿತ ಕಾರ್ಯದಿಂದ ಪರಿಶುದ್ಧವಾಗಿ ಪ್ರಾಮಾಣಿಕವಾಗಿ ಅದೃಷ್ಟ ಶಾಲಿಗಳನ್ನು ಗುರುತು ಹಿಡಿದು ಅವರಿಗೆ ಬಹುಮಾನವನ್ನು ತ್ವರಿತ ಗತಿಯಲ್ಲಿ ಕೊಡುವಂತಾದ್ದರಲ್ಲಿ ನಮ್ಮ ರಾಜ್ಯ ಮೊದಲನೆಯದಾಗಿದೆ ಎನ್ನುವುದನ್ನು ನಾನು ಸಂತೋಷವಾಗಿ ನಮ್ಮ ಸದಸ್ಯರ ಗಮನಕ್ಕೆ ತಿಳಿಸಬಯಸುತ್ತೇನೆ.

ಶ್ರಿ ಜಿ.ಎಸ್.ಆಚಾರ್:- ಸನ್ಮಾನ್ಯ ಅಧ್ಯಕ್ಷಿಣಿಯವರೇ, ಮಾನ್ಯ ಸಚಿವರು ಕೆಲವೊಂದು ವಿಶಿಷ್ಟ ಯೋಜನೆಗಳನ್ನು ಮಾಡಿ "ಮೈಸೂರು ಲಕ್ಷ್ಮಿ" ಎನ್ನುವಂತಹ ಸಿಂಗಲ್ ಡಿಜಿಟ್ ಲಾಟರಿಯನ್ನು ಮಾಡುತ್ತೇನೆ ಎನ್ನುವ ಮಾತನ್ನು ಹೇಳಿದರು, ಅದನ್ನು ನಾನು ಅಭಿನಂದಿಸುತ್ತೇನೆ. ನನಗೆ ತಿಳಿದ ಪ್ರಕಾರ , ಮಾನ್ಯ ಸಚಿವರು ಇಷ್ಟೊಂದು ಎಫಿಷಿಯೆನ್ಸ್ ಪ್ರೋಗ್ರಾಮ್ ಇದೆಲ್ಲವನ್ನು ಹಾಕಿಕೊಂಡಿದ್ದರೂ ಮೊನ್ನೆ ಏನೋ ಆರ್ಥಿಕತೆಯನ್ನು ಕುರಿತು ಮಾತನಾಡುವಾಗ ಇದನ್ನು ಅಗತ್ಯ ಬಿದ್ದರೆ ಖಾಸಗಿಯವರಿಗೆ ಹಸ್ತಾಂತರಿಸಲಾಗುವುದು ಎನ್ನುವ ಒಂದು ಮಾತನ್ನು ಕೇಳಿದೆ, ಇದು ನಿಜವೆ? ಎರಡನೆಯದಾಗಿ ಈಗಾಗಲೇ ಈ ಲಾಟರಿ ಮಾರಾಟ ಎಂ.ಎಸ್.ಐ.ಎಲ್. ಸಂಸ್ಥೆಗೆ ವಹಿಸಿಕೊಡಲಾಗಿದೆ. ಸಾಧಾರಣ ಶೇಕಡ 50 ರಷ್ಟು ಲಾಟರಿ ವರ್ಕ್ ಅವರಿಗೆ ಆಗುತ್ತದೆ. ಎಂ.ಎಸ್.ಐ.ಎಲ್. ಸಂಸ್ಥೆ ಬಹಳ ಒಳ್ಳೆಯ ರೀತಿಯಲ್ಲಿ ನಡೆಯುತ್ತಿದೆ ಎನ್ನುವ ಕಾರಣದಿಂದ ಕೆಲವು ನಷ್ಟದಲ್ಲಿರುವ ಸಂಸ್ಥೆಗಳಿಗೆ ರಿಟ್ರೆಂಚ್ ಮಾಡಿದ್ದಾರೆ. ಕಿಯೋನಿಕ್ಸ್, ಎಂ.ಸಿ.ಟಿ. ಕಿಂಕೋ ಅದರಲ್ಲಿರುವ ನೌಕರರನ್ನೆಲ್ಲಾ ಎಂ..ಎಸ್.ಐ.ಎಲ್.ಗೆ ಹಾಕಿದ್ದಾರೆ. ಹಾಗಾಗಿ ಎಂ.ಎಸ್.ಐ.ಎಲ್‌ನಲ್ಲೂ ನಾಳೆ ಲಾಸ್‌ನಲ್ಲಿ ಹೋಗುವ ಪರಿಸ್ಥಿತಿ ಬರುತ್ತದೆ. ಈ ತರಹ ಆಗುವುದು ಬೇಡ, ಆದ್ದರಿಂದ ಎಂ.ಎಸ್.ಐ.ಎಲ್. ಸಂಸ್ಥೆ ಬೆಳೆಸುವುದು ಬಹಳ ಅಗತ್ಯವಿದೆ. ಎರಡನೆಯದಾಗಿ ನಮ್ಮ ರಾಜ್ಯದ ಒಂದು ಮೈಸೂರು ಲಕ್ಷ್ಮಿ ಅಂತ ಇದ್ದ ಮೇಲೆ ಈ ಮೈಸೂರು ಲಕ್ಷ್ಮಿಯನ್ನು ತೆಗೆದುಕೊಂಡು ಹೋಗಿ ಆಂಧ್ರ ಲಕ್ಷ್ಮಿಗೆ ಕೊಡುವುದು ಒಳ್ಳೆಯದಲ್ಲ. ಆಂಧ್ರಾದ್ದು ಆಂಧ್ರಾಕ್ಕೆ ಇರಲಿ, ಎಂದು ಹೇಳುತ್ತಿದ್ದೇನೆ. ಒಂದು ವರ್ತಮಾನ, ಇವತ್ತು ಎಲ್ಲಾ ಕಡೆಯಿಂದಲೂ ಆಂಧ್ರದವರು ಬರುತ್ತಾರೆ. ಆಂಧ್ರದವರು ನಮ್ಮ ದೇಶದವರೇ ಆದರೂ ಸಹ ಕರ್ನಾಟಕದಲ್ಲಿ ಬೋರ್‌ವೆಲ್ ತೋಡುವುದಕ್ಕೆ ಆಂಧ್ರದವರು ಬರಬೇಕು, ಪ್ರಾಜೆಕ್ಟ್ ಕಂಟ್ರಾಕ್ಟ್ ಅವರಿಗೆ, ಅವರಿಗೆ ಗ್ಯಾನ್ಟೆಟ್ ಗುತ್ತಿಗೆ ಕೊಡುತ್ತಾರೆ. ಈ ಲಾಟರಿ ಸಹ ಆಂಧ್ರದವರದ್ದೇ ಆದರೆ ಕರ್ನಾಟಕದಲ್ಲಿ ಜನ ಇಲ್ಲವೆ ? ಕರ್ನಾಟಕದವರು ಏನು ಮಾಡುತ್ತಾರೆ? ನಮ್ಮ ಕರ್ನಾಟಕದ ಯಾವುದೇ ಉದ್ಯಮಿಗಳನ್ನು ಹೊರಕ್ಕೆ ಹಾಕಬೇಡಿ ಮತ್ತು ತಾವು ಮೈಸೂರು

ಲಕ್ಷ್ಮಿ ಅಂತ ಏನು ಮಾಡಿದ್ದೀರಿ, ಈ ಹೆಸರು ಇಟ್ಟು ಕೂಡಲೇ ಮೈಸೂರು ಲಕ್ಷ್ಮಿಯನ್ನು ತೆಗೆದು ಕನ್ಯಾದಾನ ಮಾಡಿ ಬೇರೆ ಕಡೆಗೆ ಹೋಗುವಂತಹ ಕಾರ್ಯ ಆಗದೇ ಇರಲಿ, ಕರ್ನಾಟಕದಲ್ಲಿಯೇ ಉಳಿಯಲಿ ಕರ್ನಾಟಕದಲ್ಲಿ ಈಗಾಗಲೇ ಇಂತಹ ಯೋಜನೆ ಇದೆಯೇ ಎಂದು ಕೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಟಿ.ಎಂ.ಮಂಜುನಾಥ್:- ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಅವರು ಏನು ಅಪೇಕ್ಷೆ ಪಟ್ಟಿದ್ದಾರೆ ನಮ್ಮ ರಾಜ್ಯದ ಹಣ ನಮ್ಮಲ್ಲಿ ಇರಬೇಕು ಎನ್ನುವ ದೃಷ್ಟಿಯಿಂದ ಆ ಕಾರ್ಯವನ್ನು ನಾವು ಮಾಡಿದ್ದೇವೆ. ಎಂ.ಎಸ್.ಐ.ಎಲ್. ಸಂಸ್ಥೆಗೆ ಏತಕ್ಕೆ ನಾವು ವಹಿಸಿದ್ದೇವೆಂದರೆ ಆ ಸಂಸ್ಥೆ ಒಳ್ಳೆಯ ರೀತಿಯಲ್ಲಿ ಕೆಲಸ ಮಾಡುತ್ತಿದೆ. ಆದರ ಶಾಖೆಗಳು ನಮ್ಮ ರಾಜ್ಯದ ಎಲ್ಲಾ ಕಡೆ ಕೆಲಸಮಾಡುತ್ತಿವೆ. ಅಲ್ಲದೆ, ದೆಹಲಿ, ಬಾಂಬೆ, ಕಲ್ಕತ್ತಾ, ಇಂತಹ ದೊಡ್ಡ ನಗರಗಳಲ್ಲಿ ಅದರ ಒಂದು ಬ್ರಾಂಚ್‌ನ್ನು ಇಟ್ಟುಕೊಂಡು ಇವತ್ತಿನ ದಿವಸ ಕೆಲಸ ಮಾಡುತ್ತಿವೆ. ಅದು ಒಳ್ಳೆಯ ಪರಿಣಾಮಕಾರಿಯಾಗಿ ಕೆಲಸ ಮಾಡುತ್ತಿದೆ. ಈ ಲಾಟರಿ ಕೆಳಗಡೆ ಸುಮಾರು ಒಂದು ಲಕ್ಷ ಜನ ನಿರುದ್ಯೋಗಿಗಳು ಲಾಟರಿ ಟಿಕೆಟ್‌ಗಳನ್ನು ಮಾರಿ ಇವತ್ತಿನ ದಿವಸ ಜೀವನ ಮಾಡುತ್ತಿದ್ದಾರೆ. ನಮ್ಮ ಕರ್ನಾಟಕ ರಾಜ್ಯದಲ್ಲಿ ಇವತ್ತಿನ ದಿವಸ 80 ಸಾವಿರ ಜನ ಇವತ್ತಿನ ದಿವಸ ಜೀವನ ಮಾಡುತ್ತಿದ್ದಾರೆ. ಆದರಲ್ಲೂ ಈ ಕರ್ನಾಟಕದಲ್ಲಿ ಇವತ್ತಿನ ದಿವಸ 20 ಸಾವಿರ ಜನ ಇದರ ಮುಖಾಂತರ ಜೀವನವನ್ನು ಮಾಡುತ್ತಿದ್ದಾರೆ. ಮೂರು ಸಾವಿರ ಏಜೆಂಟ್‌ಗಳನ್ನು ಇವತ್ತಿನ ದಿವಸ ಮಾಡಿದ್ದೇವೆ. ಅವರು ಏನು ಹೇಳುತ್ತಿದ್ದಾರೆ ನಮ್ಮ ರಾಜ್ಯದ ಹಣವನ್ನು ನಾವೇ ಉಳಿಸಿಕೊಳ್ಳುತ್ತೇವೆ, ಮತ್ತು ಇದನ್ನು ಬೇರೆಯವರಿಗೆ ಕೊಡತಕ್ಕಂತಹ ವ್ಯವಸ್ಥೆ ಇದೆಯೆಂದು ಕೇಳಿದೆವು ಎಂದು ಅವರು ಹೇಳಿದರು, ಆ ರೀತಿ ನಾವು ಹೇಳಲಿಲ್ಲ. ಪ್ರಾಸಂಗಿಕವಾಗಿ ನಮ್ಮ ಮುಖ್ಯಮಂತ್ರಿಗಳು ಈ ಲಾಟರಿ ಒಳಗೆ ಹೆಚ್ಚಿಗೆ ಲಾಭ ಬರುತ್ತಿಲ್ಲ ಕಾನ್ಸ್ಟೆಂಟ್ ಆಗಿದೆ. ಇದನ್ನು ಇನ್ನು ಹೆಚ್ಚಾಗಿ ಬೆಳೆಸಬೇಕಾದರೆ ಖಾಸಗಿಯವರಿಗೆ ಕೊಟ್ಟರೆ ಉತ್ತಮ ಎನ್ನುವಂತಹ ಅವರ ಒಂದು ಮನಸ್ಸಿನ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆಯೇ ವಿನಃ ಯಾರೂ ಸಹ ಬೇರೆಯವರಿಗೆ ಕೊಡಬೇಕೆನ್ನುವ ಉದ್ದೇಶ ಏನು ಇಲ್ಲ. ಆ ತರಹದ ಯಾವ ಕಾರ್ಯಗಳು ನಡೆದಿಲ್ಲವೆಂದು ನಾನು ಸ್ಪಷ್ಟೀಕರಣ ಮಾಡುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್:- ಸನ್ಮಾನ್ಯ ಉಪಾಧ್ಯಕ್ಷಿಣಿಯವರೆ, ಈ ಲಾಟರಿ ಯೋಜನೆ ಒಂದು ರೀತಿ ರಾಜ್ಯದ ಜನತೆಗೂ ಮತ್ತು ಕರ್ನಾಟಕಕ್ಕೂ ಕೀರ್ತಿ ತಂದಿದೆಯೇ ಅಂಥ ಒಂದು ಪ್ರಶ್ನೆ. ನನಗೆ ಅನಿಸುತ್ತದೆ ಇದನ್ನು ನಾವೇ ಸರ್ಕಾರವೇ ಈ ಒಂದು ಜೂಜಿನ ತರಹ ಮಾಡಿದಂತೆ ಆಗುತ್ತದೆ. ಇದಕ್ಕೆ ಒಂದು ಪ್ರೋತ್ಸಾಹ ಕೊಟ್ಟು ಈ ಮಧ್ಯೆ ಒಂದು ಹೊಸದಾಗಿ ಜೂಜು ಪ್ರಾರಂಭವಾಗಿದೆ. ಏನೋ ಒಂದು ನಂಬರ್ ಬಿಟ್ಟರೆ, ಒಂದೊಂದು ಲಾಟರಿ ಅಂಗಡಿಯ ಮುಂದೆ ಪ್ರತಿ ದಿನ ಕನಿಷ್ಟ 50 ಜನ ಸೇರಿರುತ್ತಾರೆ. ಮತ್ತೊಂದು ಜೂಜು ಈಗ ಶುರುವಾಗಿದೆ. ಇದು ಅಲ್ಲದೇ ಹೊರಗಡೆ ರಾಜ್ಯದ ಲಾಟರಿ ಟಿಕೇಟು ಇಲ್ಲಿ ಮಾರಾಟವಾಗುತ್ತಿದೆ. ಈ ಲಾಟರಿ ಟಿಕೇಟುಗಳು ಎಷ್ಟು ಸತ್ಯವಾಗಿ ಮುದ್ರಣ ಆಗುತ್ತವೆ ಎನ್ನತಕ್ಕಂಥದ್ದು ನಿಮ್ಮ ಗಮನಕ್ಕೆ ಬಂದಿದೆಯೇ. ಇವೊತ್ತು ಖೋಟಾ ನೋಟುಗಳನ್ನೇ ಮುದ್ರಣ ಮಾಡಿ ಬೀದಿ ಬೀದಿಯಲ್ಲಿ ಹಂಚತಕ್ಕಂಥ ಈ ಸಂದರ್ಭದಲ್ಲಿ ಲಾಟರಿ ಟಿಕೇಟುಗಳು ಪ್ರಮಾಣಿಕವಾಗಿ ಮುದ್ರಣವಾಗಿ ಹೊರಗಡೆ ಬರುತ್ತವೆಯೇ ಎನ್ನುವಂಥಾದ್ದರ ಬಗ್ಗೆ ನೀವು ಎಷ್ಟರಮಟ್ಟಿಗೆ ಎಚ್ಚರಿಕೆ ವಹಿಸುತ್ತಿದ್ದೀರಿ ? ಹೊರಗಡೆ ರಾಜ್ಯದ ಲಾಟರಿ ಟಿಕೇಟುಗಳನ್ನು ತಪ್ಪಿಸುವುದಕ್ಕೆ ನೀವು ಏನಾದರು ಕ್ರಮವನ್ನು ತೆಗೆಗುಕೊಂಡಿದ್ದೀರಾ ಮತ್ತು ಈ ಲಾಟರಿ ಟಿಕೇಟು ವಿಚಾರದಲ್ಲಿ ಬೇರೆ ಜೂಜು ಒಂದು ಪ್ರಾರಂಭವಾಗಿದೆ. ಪ್ರಾಸಂಗಿಕವಾಗಿ ನಾನು ಒಂದು ವಿಷಯವನ್ನು ಪ್ರಸ್ತಾಪ ಮಾಡುತ್ತಿದ್ದೇನೆ, ಎಂದು ನೀವು ಹೇಳಿದಿರಿ. ಆದರೆ ಮುಖ್ಯಮಂತ್ರಿಗಳು ಇದರ ಬಗ್ಗೆ ಹೇಳಿರತಕ್ಕಂಥ ಉದ್ದೇಶ ಏನೆಂದರೆ, ಲಾಟರಿಯಿಂದ ಬರತಕ್ಕಂಥ ಆದಾಯ ಸ್ವಲ್ಪ ಕಡಿಮೆ ಕಂಡ ಹಾಗೆ ಕಾಣುತ್ತಿದೆ, ಆದ್ದರಿಂದ ಖಾಸಗಿಯವರಿಗೆ ವಹಿಸಿಕೊಡೋಣ ಅಂಥ ಮಾನ್ಯ ಮುಖ್ಯ ಮಂತ್ರಿಗಳು ಹೇಳಿದರೆ, ಮುಖ್ಯಮಂತ್ರಿಯವರ ಮಾತನ್ನು ನೀವು ಒಪ್ಪುತ್ತೀರಾ ?

ಶ್ರೀ ಟಿ.ಎಂ.ಮಂಜುನಾಥ್:- ಮೊದಲನೆಯದಾಗಿ ತಾವು ಒಳ್ಳೆಯ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದೀರಿ. ನಾವು ಈ ದಿನನಿತ್ಯದ ಲಾಟರಿ, ಸಿಂಗಲ್ ಡಿಜಿಟ್ ಲಾಟರಿ ಮಾಡುವುದಕ್ಕೆ ಮುಂಚೆ ನಮ್ಮ ರಾಜ್ಯದಲ್ಲೆ ತಾವು ನೋಡಿದ ಹಾಗೆ ಲಾಟರಿ ಅಂಗಡಿಗಳ ಮುಂದೆ ಜನಸಂದಣಿ ಇರುತ್ತಿತ್ತು. ನಾವು ಸಿಂಗಲ್ ಡಿಜಿಟ್ ಲಾಟರಿ ಮಾಡಿರತಕ್ಕಂಥದ್ದು ಒಂದು ತಿಂಗಳಿಂದ ಈಚೆಗೆ. ಲಾಟರಿ ಅಂಗಡಿಗಳ ಮುಂದೆ ಜನ ಸಂದಣಿ ಇರತಕ್ಕಂಥದ್ದನ್ನು ಕೆಲವು ವರ್ಷಗಳಿಂದ ನೋಡುತ್ತಿದ್ದೆವು. ಅದನ್ನು ತಪ್ಪಿಸುವುದಕ್ಕೋಸ್ಕರ, ತಾವು ಹೇಳಿದ ಹಾಗೆ, ಈ ಫ್ರಾಡ್ ಟಿಕೇಟ್‌ಗಳು, ಮೋಸ ಮಾಡತಕ್ಕಂಥವು ಏನಿವೆ ಆ ಟಿಕೇಟ್‌ಗಳನ್ನು ಮಾರಾಟ ಮಾಡಿ ನಮ್ಮ ಜನ ಮೋಸ ಹೋಗಬಾರದು ಎನ್ನತಕ್ಕಂಥ ದೃಷ್ಟಿಯಿಂದ ನಾವು ಸರಿಯಾದ, ವ್ಯವಸ್ಥಿತವಾದ ರೀತಿಯಲ್ಲಿ ಟಿಕೇಟ್‌ಗಳನ್ನು ಮುದ್ರಣ ಮಾಡಲು ಗೌರ್ನಮೆಂಟ್ ಪ್ರೆಸ್ ಗೆ ಕೊಡುತ್ತೇವೆ. ಅಲ್ಲದೆ ನಾವು ಬೇರೆ ಕಡೆ ಅಂದರೆ ಎಲ್ಲಿ ಸೆಕ್ಯೂರಿಟಿ ಇದೆಯೋ ಅಲ್ಲಿಗೆ ಕೊಟ್ಟು ಟಿಕೇಟ್‌ಗಳನ್ನು ಮುದ್ರಣ ಮಾಡಿಸುತ್ತಿದ್ದೇವೆ. ಖೋಟಾ ಟಿಕೆಟ್‌ಗಳನ್ನು ಮಾರುತ್ತಾರೆ ಎನ್ನತಕ್ಕಂಥ ದೃಷ್ಟಿಯಿಂದ ಹತ್ತು ಲಾಟರಿ ಟಿಕೇಟ್‌ಗಳನ್ನು ನಾವು ಈ ದೇಶದಿಂದ ಭರ್ತೆರ್ಫ್ ಮಾಡಬೇಕು. ಅವರಿಗೆ ಶಿಕ್ಷೆ ಮಾಡಬೇಕು. ಎಂಬ ಉದ್ದೇಶದಿಂದ ಕಾಯಿದೆ ಪ್ರಕಾರ ಅವರ ಮೇಲೆ ನಮ್ಮ ಇಲಾಖೆಯವರು ಈಗಾಗಲೇ ಕ್ರಮ ತೆಗೆದುಕೊಂಡಿದ್ದಾರೆ. ಇದನ್ನು ಮಾಡತಕ್ಕಂಥ ಉದ್ದೇಶ ಇಷ್ಟೆ. ಸನ್ಮಾನ್ಯ ವಾಟಾಳ್ ನಾಗರಾಜ್ ರವರೆ, ಇದರಲ್ಲಿ ಸರ್ಕಾರದ ಆದಾಯ ಮುಖ್ಯ ಅಲ್ಲ, ನಾವು ಬೇರೆ ರಾಜ್ಯದ ಟಿಕೇಟ್‌ಗಳನ್ನು ಮಾರಬೇಡಿ ಎಂದು ಹೇಳತಕ್ಕಂಥಾದ್ದು ಸರ್ಕಾರಕ್ಕೆ ಬಿಟ್ಟಿರತಕ್ಕದ್ದು, ಆ ರೀತಿಯಾಗಿ ಅವರು ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ. ಆ ರಾಜ್ಯದ್ದು ಮಾರುತ್ತಾರೆ, ಈ ರಾಜ್ಯದ್ದೂ ಮಾರುತ್ತಾರೆ. ಅದು ಒಂದು ಸಮಸ್ಯೆ ಇದೆ. ಆದ್ದರಿಂದ ನಮ್ಮ ದೇಶದ ಜನತೆಗೆ ಅನ್ಯಾಯ ಆಗಬಾರದು ಮೋಸ ಆಗಬಾರದು. ಜನತೆ ತೆಗೆದುಕೊಳ್ಳುವಂಥ ನಮ್ಮ ರಾಜ್ಯದ ಟಿಕೇಟುಗಳಲ್ಲಿ ನಾವು ಪ್ರಾಮಾಣಿಕವಾಗಿ ಬಹುಮಾನ ಕೊಡುತ್ತಿದ್ದೇವೆ. 100 ರೂಪಾಯಿನ ಟಿಕೇಟಿಗೆ 83 ರೂಪಾಯಿ ಬಹುಮಾನ ಕೊಡುತ್ತಾ ಇದ್ದೇವೆ. ಈ ಸಂದರ್ಭದಲ್ಲಿ ನಮ್ಮ ಸಿಂಗಲ್ ಡಿಜಿಟ್ ಲಾಟರಿ ಬಗ್ಗೆ ನಿಮಗೆ ಒಂದು ಮಾಹಿತಿ ಕೊಡುತ್ತೇನೆ. ಸಿಂಗಲ್ ಡಿಜಿಟ್ ಲಾಟರಿಯಲ್ಲಿ ನಾವು ಎಂಭತ್ತೂವರೆ ಪರ್‌ಸೆಂಟ್ ಬಹುಮಾನ ಕೊಡುತ್ತೇವೆ. ಇನ್ನು ಒಂದೂವರೆ ಪರ್‌ಸೆಂಟ್ ಮಾತ್ರ ನಮ್ಮ ಸರ್ಕಾರಕ್ಕೆ ಆದಾಯ ಬರತಕ್ಕಂಥಾದ್ದು. ಒಂದು ವರ್ಷಕ್ಕೆ ಈ ಸಿಂಗಲ್ ಡಿಜಿಟ್ ಲಾಟರಿಯಿಂದ ಆದಾಯ ಬರತಕ್ಕಂಥಾದ್ದು ಬರೀ 95 ಲಕ್ಷ ರೂಪಾಯಿಗಳು. ಆದರೆ ಇದರ ಟರ್ನೋವರ್ ಮಾತ್ರ ದೊಡ್ಡದಾಗಿ ಕಾಣುತ್ತದೆ. ಆದ್ದರಿಂದ ಲಕ್ಷಾಂತರ ಜನ ಅದೃಷ್ಟವಂತರನ್ನು ಆರಿಸಿ, ಹೊರಗಡೆ ಹಣ ಏನು ಹೋಗುತ್ತಿದೆ, ಆವರು ಅನ್ಯಾಯವಾಗಿ ಮೋಸ ಪಡುತ್ತಿದ್ದಾರೆ ಅದನ್ನು ತಪ್ಪಿಸುವುದಕ್ಕೋಸ್ಕರ ಇದನ್ನು ನಾವು ಮಾರ್ಪಾಡು ಮಾಡಿದ್ದೇವೆ. ಮತ್ತು ತಾವು ಕೇಳಿದಿರಿ. ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದನ್ನೇ ನಾನೂ ಸಹ ಒಪ್ಪಬೇಕಾಗುತ್ತದೆ, ಅವರ ಅಭಿಪ್ರಾಯವೇ ನನ್ನ ಅಭಿಪ್ರಾಯ.

ಶ್ರೀ ವಾಟಾಳ್ ನಾಗರಾಜ್: ಈ ಅದೃಷ್ಟ ಯಾರೋ ಕೆಲವರಿಗೆ ಹೋಗುತ್ತಾ ಇದೆ, ನಮಗೆ ಯಾವತ್ತೂ ಬಂದಿಲ್ಲ. ನಮಗೂ ಒಂದು ಅದೃಷ್ಟ ಟಿಕೇಟ್, ಒಂದು 20 ಲಕ್ಷ ರೂಪಾಯಿದು ಟಿಕೆಟ್ ನಮ್ಮ ಹೆಸರಿಗೆ ಬರುವ ರೀತಿ ಏನಾದರೂ ಒಂದು ವ್ಯವಸ್ಥೆ ಮಾಡಿ. ತಾವು ದಯಮಾಡಿ ಏನಾಗರೂ ಮಾಡಿ ಈ ರೂಪದಲ್ಲಾದರೂ ನಮಗೆ ಹಣ ಬರುವುದಕ್ಕೆ ವ್ಯವಸ್ಥೆ ಮಾಡಿ.

(ಗೊಂದಲ)

ಶ್ರೀ ಬಸವರಾಜ್ ರಾಯ ರೆಡ್ಡಿ:- ಸನ್ಮಾನ್ಯ ಉಪಾಧ್ಯಕ್ಷೆಣಿಯವರೆ, ಈ ವರ್ಷ ಈ ಒಂದು ಲಾಟರಿಯಿಂದ ರಾಜ್ಯಕ್ಕೆ 3 ಕೋಟಿ 18 ಲಕ್ಷ ರೂಪಾಯಿಗಳ ನಿವ್ವಳ ಲಾಭ ಬಂದಿದೆ ಎಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. 3 ಕೋಟಿ 18 ಲಕ್ಷ ರೂಪಾಯಿ ನಿವ್ವಳ ಲಾಭ ರಾಜ್ಯಕ್ಕೆ ಬಂದಿದ್ದರೂ ಕೂಡ, ಇತ್ತೀಚೆಗೆ ಮುಖ್ಯಮಂತ್ರಿಗಳು ಈ ಒಂದು ರಾಜ್ಯದ ಲಾಟರಿಯನ್ನು ಖಾಸಗೀಕರಣ ಮಾಡುತ್ತೇವೆ, ಪ್ರೈವೇಟ್‌ನವರಿಗೆ

ಕೊಡುತ್ತೇವೆ ಎಂದು ಹೇಳಿದ್ದಾರೆ. ಲಾಭ ಬರುವಂಥದ್ದನ್ನು ನೀವು ಏಕೆ ಖಾಸಗೀಕರಣ ಮಾಡುತ್ತೀರಿ ಎಂದು ದಯವಿಟ್ಟು ಹೇಳಿ. ಜೂಜು ಆಡುವವರನ್ನೆಲ್ಲಾ ಖಾಸಗೀಕರಣ ಮಾಡುತ್ತೇವೆ ಎಂದು ಹೇಳಿದ ಹಾಗೆ ಆಯಿತು. ಜೂಜನ್ನು ಖಾಸಗೀಕರಣ ಮಾಡುತ್ತಿರಾ ಹೇಗೆ ಎಂದು ನೀವು ಹೇಳಿ. ಇದನ್ನು ಖಾಸಗೀಕರಣ ಮಾಡುವುದರಿಂದ, ಈಗ ಏನು ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್ ಮೂಲಕ ಇದನ್ನು ಮಾರಾಟ ಮಾಡುತ್ತಿದ್ದೀರಿ, ಇಲ್ಲಿ ಲಾಟರಿ ವಿಭಾಗದಲ್ಲಿ ಕೆಲಸಮಾಡುತ್ತಾ ಇರುವಂಥ ಸುಮಾರು 150 ಕಾರ್ಮಿಕರಿಗೆ ಬಹಳ ತೊಂದರೆಯಾಗುತ್ತದೆ. ಖಾಸಗೀಕರಣ ಮಾಡಿದರೆ ಅವರಿಗೆ ಯಾವ ಉದ್ಯೋಗಾವಕಾಶವನ್ನು, ಬದಲಿ ಅವಕಾಶವನ್ನು ಒದಗಿಸಿಕೊಡುವ ಬಗ್ಗೆ ದಯವಿಟ್ಟು ಹೇಳಬೇಕು.

ಶ್ರೀ ಟಿ.ಎಂ.ಮಂಜುನಾಥ್:- ಇದನ್ನು ಖಾಸಗೀಕರಣ ಮಾಡತಕ್ಕ ಉದ್ದೇಶ ಸರ್ಕಾರಕ್ಕಿಲ್ಲ. ಈ ಲಾಟರಿ ಯೋಜನೆಯಿಂದ ಇನ್ನೂ ಅಧಿಕವಾದ ಆದಾಯ ರಾಜ್ಯಸರ್ಕಾರಕ್ಕೆ ಬರಬಹುದೆಂಬ ದೃಷ್ಟಿಯಿಂದ ಮಾನ್ಯ ಮುಖ್ಯ ಮಂತ್ರಿಗಳು ವಿಚಾರ ಮಾಡಿದ್ದಾರೆ. ಇದನ್ನು ಖಾಸಗಿಯವರಿಗೆ ಕೊಟ್ಟರೆ ಏನಾಗುತ್ತದೆಂಬುದನ್ನು ನಾನು ಈಗಾಗಲೇ ಹೇಳಿದ್ದೇನೆ. ನಮ್ಮ ಅಧಿಕಾರಿಗಳು ಈಗಾಗಲೆ ಇದರ ಬಗ್ಗೆ ವಿಚಾರಣೆ ಮಾಡಿ ಬಂದಿದ್ದಾರೆ. ಇದನ್ನು ಖಾಸಗಿಯವರಿಗೆ ಕೊಟ್ಟರೆ ಸರಿಯಾದ ರೀತಿಯಲ್ಲಿ ಟಿಕೆಟ್ಸ್ ಪ್ರಿಂಟ್ ಆಗುವುದಿಲ್ಲ. ಮಾನ್ಯ ಸದಸ್ಯರು ಹೇಳಿದಂತೆ, ಡೂಪ್ಲಿಕೇಟ್ ಟಿಕೆಟ್‌ಗಳನ್ನು ಪ್ರಿಂಟ್ ಮಾಡಿ ಮಾರುತ್ತಾರೆ. ಮೊದಲನೆಯ ಮತ್ತು ಎರಡನೆಯ ಬಹುಮಾನಗಳನ್ನು ಯಾರಿಗೂ ಸರಿಯಾಗಿ ಕೊಡುವುದಿಲ್ಲ, ಇದರಿಂದ ಜನರಿಗೆ ಮೋಸವಾಗುತ್ತದೆ. ಅವರೂ ಕೂಡ ಒಂದೆರಡು ವರ್ಷ ತೆಗೆದುಕೊಂಡು ಮೂರನೇ ವರ್ಷಕ್ಕೆ ಬಿಟ್ಟು ಹೋಗುತ್ತಾರೆ. ಇದರಿಂದ ಅವರಿಗೆ ಅನುಕೂಲವಾಗುತ್ತದೆಯೇ ಹೊರತು ಜನರಿಗೆ ಏನೂ ಅನುಕೂಲವಾಗುವುದಿಲ್ಲ. ತಮಗೆ ಒಂದು ಉದಾಹರಣೆಯನ್ನು ಕೊಡುವುದಾದರೆ, ಇವತ್ತು 2.50 ಕೋಟಿ ರೂಪಾಯಿ ಅನ್‌ಕ್ಲೈಮ್ಡ್ ಹಣ ನಮ್ಮ ಸರ್ಕಾರದಲ್ಲಿ ಬಿದ್ದಿದೆ. ಈ ಲಾಟರಿ ವ್ಯವಸ್ಥೆಯನ್ನು ಖಾಸಗಿಯವರಿಗೆ ಕೊಟ್ಟಿದ್ದರೆ ಈ ಹಣವೆಲ್ಲಾ ಅವರಿಗೇ ಸೇರುತ್ತಿತ್ತು. ಆದುದರಿಂದ ಇದನ್ನು ಖಾಸಗೀಕರಣ ಮಾಡುವುದು ಬೇಡ. ನಮ್ಮಲ್ಲಿ ಲಾಟರಿ ಯೋಜನೆ ಇನ್ನೂ ಜನಪ್ರಿಯವಾಗಬೇಕೆಂದು ಮಾನ್ಯ ಮುಖ್ಯ ಮಂತ್ರಿಗಳು ಯೋಚನೆ ಮಾಡಿದ್ದಾರೆ. ಆದರೆ, ಖಾಸಗೀಕರಣದ ಉದ್ದೇಶ ನಮಗೆ ಇಲ್ಲ ಎಂದು ಹೇಳಬಯಸುತ್ತೇನೆ.

ಶ್ರೀ ಬಿ.ಎಂ.ಇದಿನಬ್ಬ:- ಮಾನ್ಯ ಅಧ್ಯಕ್ಷರೆ, ಲಾಟರಿ ಯೋಜನೆಯಿಂದ ಬಂದಿರತಕ್ಕ ಆದಾಯ 3 ಕೋಟಿ ಚಿಲ್ಲರೆ ಎಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಈ ಲಾಟರಿ ಎನ್ನತಕ್ಕದ್ದು ಒಂದು ಜೂಜಾಟ. ಇದು ನಮ್ಮ ಕರ್ನಾಟಕದ ಬಡ ಜನತೆಗೆ ಸರಿಯಾದ ವ್ಯವಸ್ಥೆಯಲ್ಲ. ಒಬ್ಬರಿಗೆ ಬಂಪರ್, ಕೋಟಿಗಟ್ಟಲೆ ಜನರು ಪಾಪರ್ ಎನ್ನತಕ್ಕ ರೀತಿಯಲ್ಲಿ ಆಗಿರುವುದರಿಂದ ಈ ಲಾಟರಿ ಯೋಜನೆಯನ್ನು ರದ್ದು ಮಾಡಿ ಈ ಸಂಪನ್ಮೂಲವನ್ನು ಬೇರೆ ಯಾವುದಾದರೂ ಒಂದು ರೂಪದಲ್ಲಿ ಇದೇ 3 ಕೋಟಿ ರೂಪಾಯಿಗಳಿಗಿಂತ ಹೆಚ್ಚಿನ ವರಮಾನ ಬರತಕ್ಕ ವ್ಯವಸ್ಥೆಯನ್ನು ಏತಕ್ಕೆ ಮಾಡಬಾರದು?

ಶ್ರೀ ಟಿ.ಎಂ.ಮಂಜುನಾಥ್:- ಇದು ಸರ್ಕಾರದ ನೀತಿ ನಿಯಮದಂತೆ ಬರುತ್ತಿದೆ. ಇದು ಮಾನ್ಯ ಸದಸ್ಯರ ಅಭಿಪ್ರಾಯ. ಇದಕ್ಕೆ ನಾವು ಏನೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ಎಲ್.ಆರ್.ಶಿವರಾಮೇಗೌಡ:- ನಮ್ಮ ರಾಜ್ಯದಲ್ಲಿ ಲಾಟರಿ ಯೋಜನೆಯಿಂದ 3.18 ಕೋಟಿ ರೂಪಾಯಿ ಲಾಭ ಬಂದಿದೆ ಎಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಈ ಲಾಟರಿ ಯೋಜನೆಯನ್ನು ರದ್ದು ಮಾಡಿ ಎಂದರೆ ಇದನ್ನು ರದ್ದುಮಾಡುವುದಕ್ಕಾಗುವುದಿಲ್ಲ ಎಂದು ಹೇಳಿದ್ದಾರೆ. ನಮ್ಮ ರಾಜ್ಯದ ಲಾಟರಿ ಹೆಸರಿನಲ್ಲಿ ಇವತ್ತು ಆನಂದರಾವ್ ಸರ್ಕಲ್, ಕೆ.ಆರ್.ಸರ್ಕಲ್ ಇನ್ನೂ ಅನೇಕ ಸರ್ಕಲ್‌ಗಳಲ್ಲಿ ಹೊರ ರಾಜ್ಯಗಳ ಪೋಟಾ ಲಾಟರಿ ಟಿಕೆಟ್‌ಗಳ ಮಾರಾಟ ಆಗುತ್ತಿದೆ. ಭೂತಾನ್ ಭಾಗ್ಯಲಕ್ಷ್ಮಿ ಲಾಟರಿ ಎನ್ನತಕ್ಕದ್ದು 40-50 ರೂಪಾಯಿಗಳಿಗೆ ಒಂದೊಂದು ಟಿಕೆಟ್ ಮಾರಾಟವಾಗುತ್ತಿದೆ. ಈ ಲಾಟರಿ ಟಿಕೆಟ್‌ಗಳು ರಾಜಾಜಿನಗರದಲ್ಲಿ

ಪ್ರಿಂಟ್ ಆಗುತ್ತಿವೆ. ಈ ಜೋಟಾ ಲಾಟರಿ ಟಿಕೆಟ್‌ಗಳನ್ನು ನಿಲ್ಲಿಸಲು ಏನು ಕ್ರಮ ತೆಗೆದುಕೊಂಡಿದ್ದೀರಿ?

ಶ್ರೀ ಟಿ.ಎಂ.ಮಂಜುನಾಥ್: ಈಗಾಗಲೇ ಇದನ್ನು ನಮ್ಮ ಅಧಿಕಾರಿಗಳ ಗಮನಕ್ಕೆ ತಂದಿದ್ದೇವೆ. ನಮ್ಮ ಅಧಿಕಾರಿಗಳು ಇದನ್ನು ಸೂಕ್ಷ್ಮವಾಗಿ ಪರಿಶೀಲಿಸಿ ಅನೇಕ ಜನರ ಮೇಲೆ ಕೇಸುಗಳನ್ನು ಹಾಕಿದ್ದಾರೆ. ಆದುದರಿಂದಲೇ ನಮ್ಮ ಲಾಟರಿ ಯೋಜನೆಯನ್ನು ಖಾಸಗಿಯವರಿಗೆ ಕೊಟ್ಟರೆ ಇಂಥ ಮೋಸ ನಡೆಯುವುದಕ್ಕೆ ಅವಕಾಶವಾಗುತ್ತದೆಂದು ನಾನು ಹೇಳುತ್ತಿರುವುದು. ಹೊರ ರಾಜ್ಯಗಳ ಟಿಕೆಟ್‌ಗಳ ಬಗ್ಗೆ ಏನು ನಡೆಯುತ್ತಿದೆ ಎನ್ನುವ ಬಗ್ಗೆ ಪೋಲೀಸರಿಗೆ ಈಗಾಗಲೇ ದೂರು ನೀಡಿದ್ದೇವೆ. ಇದರ ಬಗ್ಗೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ. ಹೊರ ರಾಜ್ಯಗಳಿಂದ ಬರುವ ಲಾಟರಿ ಟಿಕೆಟ್‌ಗಳನ್ನು ತಡೆಹಿಡಿಯದೇ ಇರುವುದರಿಂದ ಮಾನ್ಯ ವಾಟಾಳ್ ನಾಗರಾಜ್‌ರವರು ಹೇಳಿದಂತೆ ನಮ್ಮ ರಾಜ್ಯದಲ್ಲಿನ ಜನರಿಗೆ ಅನೇಕ ರೀತಿಯ ಮೋಸಗಳಾಗುತ್ತಿವೆ. ಇದನ್ನು ತಪ್ಪಿಸಲು ಸರ್ಕಾರ ಕೂಡಲೇ ಸೂಕ್ತ ಕ್ರಮ ತೆಗೆದುಕೊಳ್ಳುವುದೆಂದು ನಾನು ಭರವಸೆ ಕೊಡುತ್ತೇನೆ.

ಬಸವಕಲ್ಯಾಣದಲ್ಲಿ ಸಂಚಾರಿ ಆರಕ್ಷಕ ಠಾಣೆ

(1183) ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ):-ಗೃಹ ಮತ್ತು ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :-

ಅ) ಆದಾಯ ಮತ್ತು ವಾಹನ ಸಂಚಾರಗಳ ನಿಯಂತ್ರಣದ ದೃಷ್ಟಿಯಿಂದ ಬೀದರ್ ಜಿಲ್ಲೆಯ ಬಸವಕಲ್ಯಾಣದಲ್ಲಿ ಒಂದು ಸಂಚಾರಿ ಪೋಲೀಸ್ ಠಾಣೆಯ ಅವಶ್ಯಕತೆಯು ಸರ್ಕಾರಕ್ಕೆ ತಿಳಿದಿದೆಯೇ?

ಆ) ಪ್ರತಿ ದಿನ ಸುಮಾರು 4000 ಲಾರಿಗಳು ಬಸವ ಕಲ್ಯಾಣದ ಮೂಲಕ ಹಾದುಹೋಗುವ ವಿಷಯ ನಿಜವೇ ?

ಶ್ರೀ ಧರ್ಮಸಿಂಗ್ (ಗೃಹ ಮತ್ತು ಅಬಕಾರಿ ಸಚಿವರು)-

ಅ) ಮಾನ್ಯ ಸದಸ್ಯರು ಈ ವಿಚಾರವನ್ನು ಈಗ ಪ್ರಸ್ತಾಪಿಸಿದ್ದಾರೆ. ಈ ಪ್ರಸ್ತಾವನೆಯನ್ನು ಆದ್ಯತೆ, ಅಗತ್ಯತೆ ಮತ್ತು ಆರ್ಥಿಕ ಸಂಪನ್ಮೂಲಗಳನ್ನು ಆಧರಿಸಿ ಪರಿಶೀಲಿಸಲಾಗುವುದು.

ಆ) ಹೌದು.

ಶ್ರೀ ಬಸವರಾಜ ಪಾಟೀಲ್ ಅಟ್ಟೂರು:- ಮಾನ್ಯ ಅಧ್ಯಕ್ಷರೆ, ನಮ್ಮ ಬಸವ ಕಲ್ಯಾಣ ಒಂದು ಪವಿತ್ರವಾದ ಸ್ಥಳವಾಗಿದ್ದು, ತಾಲ್ಲೂಕು ಕೇಂದ್ರ ಕೂಡ ಆಗಿದೆ. ಅಲ್ಲಿ ಒಂದು ಕಂದಾಯ ಉಪ ವಿಭಾಗ ಕೂಡ ಇದೆ. ಆ ಪಟ್ಟಣದ ಜನಸಂಖ್ಯೆ ಸುಮಾರು 60 ಸಾವಿರ ಇದ್ದು ಇಡೀ ಕರ್ನಾಟಕದಲ್ಲೇ ಅತ್ಯಂತ ಹೆಚ್ಚಿನ ಲಾರಿ ವಾಹನಗಳನ್ನು ಹೊಂದಿದೆ. ಈ ಪಟ್ಟಣದಿಂದ ಹೈದರಾಬಾದ್, ಬೊಂಬಾಯಿ ಮತ್ತು ಪೂನಾಕ್ಕೆ ಸುಮಾರು 4000 ಲಾರಿಗಳು ಹೋಗಿ ಬರುತ್ತಿವೆ. ಇಷ್ಟೊಂದು ಅಧಿಕ ಸಂಖ್ಯೆಯಲ್ಲಿ ವಾಹನಗಳನ್ನು ಹೊಂದಿರುವುದರಿಂದ ಪ್ರತಿದಿನ ಅಪಘಾತಗಳು ಆಗುತ್ತಲೇ ಇರುತ್ತವೆ. ಪ್ರತಿ ದಿನ ಒಂದೆರಡು ಜೀವಕ್ಕೆ ಹಾನಿ ಆಗುತ್ತಲೇ ಇರುತ್ತದೆ. ಆ ಒಂದು ಪರಿಸ್ಥಿತಿ ಇರುವುದರಿಂದ ಅಲ್ಲಿ ಒಂದು ಟ್ರಾಫಿಕ್ ಪೋಲೀಸ್ ಸ್ಟೇಷನ್‌ನ್ನು ಈ ವರ್ಷ ಕೊಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಂಡಿದ್ದೆ, ಆದರೆ ಮಾನ್ಯ ಮಂತ್ರಿಗಳು ಏನು ಉತ್ತರ ಕೊಟ್ಟಿದ್ದಾರೆಂದರೆ, ಆದ್ಯತೆ, ಅವಶ್ಯಕತೆ ಮತ್ತು ಆರ್ಥಿಕ ಸಂಪನ್ಮೂಲಗಳನ್ನು ನೋಡಿಕೊಂಡು ಕೊಡುತ್ತೇವೆಂದು ಹೇಳಿದ್ದಾರೆ. ಇದು ದೊಡ್ಡ ಪಟ್ಟಣವಾಗಿದ್ದು ಹೆಚ್ಚು ವಾಹನಗಳು ಓಡಾಡುತ್ತಿರುವುದರಿಂದ ಜನರಿಗೆ ಬಹಳಷ್ಟು ತೊಂದರೆ ಆಗುತ್ತಿದೆ. ಆದುದರಿಂದ ಈ ವರ್ಷದಲ್ಲೇ ಅಲ್ಲಿಗೆ ಒಂದು ಟ್ರಾಫಿಕ್ ಪೋಲೀಸ್ ಸ್ಟೇಷನ್‌ನ್ನು ಕೊಡಬೇಕೆಂದು ಮತ್ತೊಮ್ಮೆ ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಧರ್ಮಸಿಂಗ್:- ಮಾನ್ಯ ಅಧ್ಯಕ್ಷರೆ, ನಾನೂ ಕೂಡ ಬಸವಕಲ್ಯಾಣಕ್ಕೆ ಹೋಗಿದ್ದೆ. ಅವರು ಆ ಸಭೆಯಲ್ಲಿ ಪ್ರಸ್ತಾಪ ಮಾಡಿದಾಗ ನಾನು ಹೇಳಿದ್ದೇನೆ. ಬಸವ ಕಲ್ಯಾಣದಲ್ಲಿ ಟ್ರಾಫಿಕ್ ಮೂವ್‌ಮೆಂಟ್ ಹೆಚ್ಚಿಗೆ ಇರುವುದರಿಂದ, ಸರ್ಕಾರ ಇದನ್ನು ಪರಿಶೀಲನೆ ಮಾಡಿ ಈ ವರ್ಷವೇ ಬಸವ ಕಲ್ಯಾಣಕ್ಕೆ ಒಂದು ಟ್ರಾಫಿಕ್